ದಿನಾಂಕಃ **05.08.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಅರ್ಜಿದಾರರ ಪರ ಶ್ರೀ. ಎ.ಪಿ.ಎನ್. ವಕೀಲರಿಂದ :</u>**

(ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ, ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.)

ಗಾಯಾಳು ಸ್ವಾಮಿ ರವರ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು **ನಿಪಿ-10** ಎಂದು, 3 ಎಕ್ಸರೇಗಳನ್ನು ಒಟ್ಟಾಗಿ **ನಿಪಿ11** ಎಂದು, ಡಿಸೆಬಿಲಿಟಿ ಕ್ಯಾಲ್ಕುಲೇಷನ್ ಒಪಿಡಿ ಸ್ಲಿಪನ್ನು **ನಿಪಿ12** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ. ವಿ.ವಿ. ವಕೀಲರಿಂದ :</u>**

ಅಪಘಾತ ಆದ ಸುಮಾರು 2 ತಿಂಗಳ ನಂತರ ಗಾಯಾಳು ನಮ್ಮ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಗಾಯಾಳು ಹಿಂದೆ ತಾನು ಏನೇನು ಚಿಕಿತ್ಸೆ ಪಡೆದುಕೊಂಡಿರುತ್ತಾರೆಂದು ಹಾಜರುಪಡಿಸಿರುವ ದಾಖಲೆಯನ್ನು ನೋಡಿ ಮುಂದುವರೆದ ಚಿಕಿತ್ಸೆಯನ್ನು ನಮ್ಮ ಆಸ್ಪತ್ರೆಯಲ್ಲಿ ನೀಡಿರುತ್ತೇವೆ. ದಿನಾಂಕ 04.05.2020 ರಂದು ಟಿ.ನರಸೀಪುರ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಗಾಯಾಳು ಮೌಖಿಕವಾಗಿ ಹೇಳಿರುತ್ತಾರೆಯೇ ಹೊರತು ನನಗೆ ಯಾವ ದಾಖಲೆಯನ್ನು ನೀಡಿರುವುದಿಲ್ಲ.

2. ದಿನಾಂಕ 08.07.2020 ರಂದು ಗಾಯಾಳುವನ್ನು ಮೊದಲು ನಮ್ಮ ವೈದ್ಯಾಧಿಕಾರಿಗಳು ಪರಿಶೀಲಿಸಿರುತ್ತಾರೆ. ಗಾಯದ ವಯಸ್ಸು ಕುರಿತು ವೈದ್ಯಾಧಿಕಾರಿಗಳು ಕೇಸ್ ಶೀಟಿನಲ್ಲಿ ನಮೂದಿಸಿರುವುದಿಲ್ಲ. ಆ ಕಾರಣ ಗಾಯದ ನಿಖರ ವಯಸ್ಸನ್ನು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಕ್ಸರೇ ಇತ್ಯಾದಿಗಳಿಂದ ನಾವು ಪರಿಗಣಿಸುತ್ತೇವೆ ಎಂದು ನುಡಿಯುತ್ತಾರೆ. ವೈದ್ಯಾಧಿಕಾರಿಗಳು ಗಾಯಾಳುವನ್ನು ಪರಿಶೀಲನೆ

ಮಾಡಿರುವುದರಿಂದ ಗಾಯದ ವಯಸ್ಸನ್ನು ಅವರೇ ನಮೂದಿಸಬೇಕಾಗುತ್ತದೆಯೇ ಹೊರತು ನಾನು ಹೇಳಲು ಆಗುವುದಿಲ್ಲ. ದಿನಾಂಕ 08.07.2020 ರ ಗಾಯಾಳುವಿಗೆ ತೆಗೆದ ಎಕ್ಸರೇ ಅನ್ನು ಈ ದಿನ ಹಾಜರುಪಡಿಸಿರುತ್ತೇನೆ. ಆ ನಂತರ ಕನ್ಸರ್ವೇಟಿವ್ ಚಿಕಿತ್ಸೆಯನ್ನು ಗಾಯಾಳುವಿಗೆ ನೀಡಿ ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತೇವೆ. ರೋಗಿಯು ಸ್ಟೇಬಲ್ ಆಗಿರುತ್ತಾರೆಂದು ಮನಗಂಡು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು. ಗಾಯಾಳುವಿಗೆ ನಮ್ಮ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ.

3. ದಿನಾಂಕ 18.06.2026 ರಂದು ರೋಗಿಯು ಹೊರರೋಗಿಯಾಗಿ ನನ್ನ ಬಳಿ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಹೊರರೋಗಿಯಾಗಿ ಚಿಕಿತ್ಸೆ ಪಡೆದ ದಾಖಲೆ ರೋಗಿಯ ಬಳಿಯೇ ಇರುತ್ತದೆ.

4. ನಿಪಿ12 ರಲ್ಲಿ ನ್ಯೂನ್ಯತೆ ಲೆಕ್ಕಾಚಾರವನ್ನು ನಮೂದಿಸಿರುತ್ತದೆ. ಶೇ.22 ರಷ್ಟು ನಿರ್ದಿಷ್ಟ ಅಂಗದ ನ್ಯೂನ್ಯತೆ ಇರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತೇನೆ. ಈ ಕುರಿತು ಪ್ರತ್ಯೇಕವಾಗಿ ಡಿಸೆಬಿಲಿಟಿ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ. ಗಾಯಾಳುವಿಗೆ ಸಹಾಯ ಮಾಡುವ ಉದ್ದೇಶದಿಂದ ಉತ್ರೇಕ್ಷೆಯಿಂದ ಶೇ.22 ರಷ್ಟು ನ್ಯೂನ್ಯತೆ ಇದೆ ಎಂದು ನೀಡಿರುತ್ತೇನೆ ಎಂದರೆ ಸರಿಯಲ್ಲ. ಗಾಯಗಳು ಅಪಘಾತದಿಂದ ಉಂಟಾದ ಗಾಯಗಳಲ್ಲ ಎಂದರೆ ಸರಿಯಲ್ಲ. ಸದರಿ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿರುತ್ತದೆ ಎಂದರೆ ಸರಿಯಲ್ಲ. ಗಾಯಾಳುವಿಗೆ ಸಹಾಯ ಮಾಡುವ ಸಲುವಾಗಿ ಅನುಕಂಪದಿಂದ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : 4 ನೇ ಎದುರುದಾರರ ಪರ ಶ್ರೀ. ಎನ್.ಎಂ.ಜಿ. ವಕೀಲರಿಂದ :</u>

ಗಾಯದ ವಯಸ್ಸನ್ನು ನಾನು ಹೇಳಬಹುದು ಎಂದರೆ ಸಾಕ್ಷಿಯು ಎರಡುವರೆ ತಿಂಗಳೊಳಗೆ ಗಾಯಗಳಾಗಿವೆ ಎಂದು ನಾನು ಹೇಳಿರುತ್ತೇನೆ. ಆಗಿದೆ ಎಂದು ಹೇಳಲಾದ ಗಾಯಗಳು ಅಪಘಾತದಿಂದ ಆಗಿರುವುದಿಲ್ಲ, ಬೇರೆ ಕಾರಣದಿಂದ ಉಂಟಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. 2024 ರ ಕೇಂದ್ರ ಸರ್ಕಾರದ ಸುತ್ತೋಲೆ ಅನ್ವಯ

ಮಾರ್ಗದರ್ಶಿ ಸೂಚಿಯಂತೆ ಶೇಕಡವಾರು ನ್ಯೂನ್ಯತೆಯನ್ನು ನೀಡಿರುತ್ತೇನೆ. ಕರ್ತವ್ಯನಿರತ ಆಸ್ಪತ್ರೆ ವೈದ್ಯಾಧಿಕಾರಿಗಳು ಕೇಸ್ ಶೀಟನ್ನು ನಿರ್ವಹಿಸಿರುತ್ತಾರೆ. ಗಾಯಗಳು ಅಪಘಾತದಿಂದ ಉಂಟಾದ ಗಾಯಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ಗಾಯಾಳು ನನ್ನ ಪರಿಚಯಸ್ಥರಾಗಿರುವುದರಿಂದ ಅನುಕೂಲ ಮಾಡಿಕೊಡುವ ಸಲುವಾಗಿ ಅನುಕಂಪದಿಂದ ಅಂಗನ್ಯೂನ್ಯತೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಭಿಪ್ರಾಯಪಟ್ಟಿರುವ ಅಂಗನ್ಯೂನ್ಯತೆ ಸರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

**(ಉಳಿದಂತೆ 2 ನೇ ಎದುರುದಾರರ ಪರ ವಕೀಲರು ನಡೆಸಿದ ಪಾಟೀ ಸವಾಲನ್ನು 4 ನೇ ಎದುರುದಾರರು ಅನುಮೋದಿಸಿರುತ್ತಾರೆ.**

**(1 ಮತ್ತು 3 ನೇ ಎದುರುದಾರರ ಪರ ವಕೀಲರು ಮತ್ತು ಎದುರುದಾರರು ಹಾಜರಿರುವುದಿಲ್ಲ. ಆದುದರಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

**1 ನೇ ಅಪರ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**